ನವ ಕಾನೂನು ಪದವೀಧರರಿಗೆ ಪ್ರೋತಾಹಧನ ನೀಡುವ ಯೋಜನೆಯ ಆಯ್ಕೆ ಸಮಿತಿ
ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು- **560 009**

**ಅಧಿಸೂಚನೆ**

**ಸಂಖ್ಯೆ: ಎಡಿಎಂ/76/2025, ದಿನಾಂಕ: 28.01.2025**

| | | |
|---|---|---|
| ವಿಷಯ | : | 2024-25 ನೇ ಸಾಲಿನ ನವ ಕಾನೂನು ಪದವೀಧರರಿಗೆ ಪ್ರೋತಾಹಧನ ನೀಡುವ ಯೋಜನೆಯಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ |
| ಉಲ್ಲೇಖ | : | ಸರ್ಕಾರದ ಆದೇಶ ಸಂಖ್ಯೆ- ಲಾ-ಎಲ್ಎಡಿ/26/2025 ದಿನಾಂಕ: 22-01-2025 |

----

ಮೇಲ್ಕಂಡ ಉಲ್ಲೇಖದ ಸರ್ಕಾರಿ ಆದೇಶದಲ್ಲಿ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯಡಿ ಫಲಾನುಭವಿಗಳನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಧ್ಯಕ್ಷತೆಯ ಆಯ್ಕೆ ಸಮಿತಿಯು ಆಯ್ಕೆಗೊಳಿಸಬೇಕೆಂದು ತಿಳಿಸಲಾಗಿದೆ.

ಮೇಲ್ಕಂಡ ಉಲ್ಲೇಖದ ಅನುಸಾರ ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ಘಟಕದ ವ್ಯಾಪ್ತಿಯಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿರುವ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯಡಿ 2024-25 ನೇ ಸಾಲಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **10.02.2025**
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **09.03.2025 ಸಂಜೆ 05.30 ಗಂಟೆ**

ಮೇಲ್ಕಂಡ ಉಲ್ಲೇಖದ ಸರ್ಕಾರದ ಆದೇಶದಂತೆ ಈ ಕೆಳಕಂಡ ಷರತ್ತು/ಮಾರ್ಗಸೂಚಿಗಳು ಅನ್ವಯವಾಗುತ್ತವೆ:

1) ಈ ಯೋಜನೆಯು 2024-25 ನೇ ಸಾಲಿನದ್ದಾಗಿ ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯಡಿ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಡಿಯಲ್ಲಿ ದಿನಾಂಕ: 01.06.2023 ರಿಂದ 31.05.2024 ರವರೆಗಿನ ಅವಧಿಯಲ್ಲಿ ವಕೀಲ ವೃತ್ತಿಗೆ ನೊಂದಾಯಿಸಿದವರಾಗಿರತಕ್ಕದ್ದು.

2) ಈ ಯೋಜನೆಯಡಿಯಲ್ಲಿ ಪ್ರೋತ್ಸಾಹಧನದ ಮೊತ್ತ ಪ್ರತಿ ಮಾಹೆಗೆ ರೂ. 2,000/- (ಎರಡು ಸಾವಿರ ರೂಪಾಯಿ) ಗಳು ಒಟ್ಟು 24 ತಿಂಗಳುಗಳ ಅವಧಿಗೆ ಸೀಮಿತವಾಗಿರತಕ್ಕದ್ದು.

3) ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತಿ, ಕಡ್ಡಾಯ ನಿವೃತ್ತಿ ಮತ್ತು ಸ್ವ-ಇಚ್ಛಾ ನಿವೃತ್ತಿ ಹೊಂದಿದ ನಂತರ ವಕೀಲ ವೃತ್ತಿ ನಡೆಸಲು ಇಚ್ಛಿಸುವ ಕಾನೂನು ಪದವೀಧರರಿಗೆ ಈ ಯೋಜನೆ ಅನ್ವಯವಾಗತಕ್ಕದಲ್ಲ ಮತ್ತು ಅಂತಹ ಯಾವುದೇ ಸೇವೆಯಿಂದ ತೆಗೆದುಹಾಕಲ್ಪಟ್ಟ ಕಾನೂನು ಪದವೀಧರರಿಗೆ ಸಹ ಅನ್ವಯವಾಗತಕ್ಕದಲ್ಲ.

4) ಈ ಯೋಜನೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯ/ಕುಟುಂಬದ ವಾರ್ಷಿಕ ವರಮಾನದ ಮಿತಿಯು ರೂ. 40,000/- (ನಲವತ್ತು ಸಾವಿರ ರೂಪಾಯಿಗಳು) ಗಳನ್ನು ಮೀರತಕ್ಕದ್ದಲ್ಲ.

5) ಇಂತಹದೇ ಸೌಲಭ್ಯಗಳನ್ನು ಈ ಯೋಜನೆ/ಇತರೆ ಯೋಜನೆಯಡಿ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದೇ ಇಲಾಖೆಯ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಈ ಯೋಜನೆಯ ಸೌಲಭ್ಯಗಳಿಗೆ ಅರ್ಹರಾಗತಕ್ಕದ್ದಲ್ಲ.

6) ಹೊಸದಾಗಿ ವಕೀಲರ ವೃತ್ತಿಯಲ್ಲಿ ತೊಡಗುವ ಕಾನೂನು ಪದವೀಧರರು ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಿದ ನಂತರ ಸ್ಥಳೀಯ ವಕೀಲರ ಸಂಘದ ಅಧ್ಯಕ್ಷರಿಂದ ಪ್ರಮಾಣಪತ್ರ ಪಡೆದು ಸಂಬಂಧಪಟ್ಟ ಸಮಿತಿಯ ಸಂಬಂಧಿತ ತಾಲ್ಲೂಕಿನ ಹಿರಿಯ ನ್ಯಾಯಾಧೀಶರುಗಳ ಮುಖಾಂತರ ಮತ್ತು ಜಿಲ್ಲಾ ಹಂತದಲ್ಲಿ ಅರ್ಹ ಕಾನೂನು ಪದವೀಧರರು ನೇರವಾಗಿ ಸಮಿತಿಯ ಅಧ್ಯಕ್ಷರಿಗೆ ವಿಳಾಸಿಸಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಸದರಿ ಆಯ್ಕೆ ಸಮಿತಿಯು ಸಭೆ ಸೇರಿ ನಿಯಮಗಳನುಸಾರ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಮತ್ತು ಈ ಫಲಾನುಭವಿಗಳಿಗೆ ಪ್ರೋತ್ಸಾಹಧನವನ್ನು ಡಿ.ಬಿ.ಟಿ. ಪೋರ್ಟಲ್‌ನಲ್ಲಿ ನೊಂದಾಯಿಸಿ ಖಜಾನೆ-2 ಮುಖಾಂತರ ವಿತರಿಸುವುದು.

ಅಭ್ಯರ್ಥಿಗಳಿಗೆ ಸೂಚನೆಗಳು:

1) ಅಭ್ಯರ್ಥಿಗಳು ಅರ್ಜಿಯನ್ನು ಅಧ್ಯಕ್ಷರು, ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯ ಆಯ್ಕೆ ಸಮಿತಿ ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಗರ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು-560009 ಇವರಿಗೆ ವಿಳಾಸಿಸಿ ಸಲ್ಲಿಸತಕ್ಕದ್ದು.

2) ಆನೇಕಲ್, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ವಕೀಲ ವೃತ್ತಿ ಆರಂಭಿಸಿರುವ ಅಭ್ಯರ್ಥಿಗಳು ಸದರಿ ತಾಲ್ಲೂಕುಗಳ ಹಿರಿಯ ನ್ಯಾಯಾಧೀಶರ ಮುಖಾಂತರ ಅರ್ಜಿಗಳನ್ನು ಸಲ್ಲಿಸಬೇಕು.

3) ಅಭ್ಯರ್ಥಿಗಳು ಈ ಅಧಿಸೂಚನೆಯೊಡನೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿಯೇ ಅರ್ಜಿಗಳನ್ನು ಕೊನೆಯ ದಿನಾಂಕವಾದ 09.03.2025 ರ ಒಳಗಾಗಿ ಸಲ್ಲಿಸತಕ್ಕದ್ದು.

4) ಅರ್ಜಿಗಳೊಡನೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು

ಅ) ಎಸ್.ಎಸ್.ಎಲ್.ಸಿ. ಪ್ರಮಾಣಪತ್ರ
ಆ) ಪಿಯುಸಿ ಪ್ರಮಾಣಪತ್ರ
ಇ) ಪದವಿ ಪ್ರಮಾಣಪತ್ರ
ಈ) ಕಾನೂನು ಪದವಿ ಪ್ರಮಾಣಪತ್ರ ಮತ್ತು ಅಂಕಪಟ್ಟಿಗಳು

ಉ) ವಕೀಲರ ವೃತ್ತಿ ನಡೆಸುವ ಸಲುವಾಗಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೊಂದಾಯಿಸಿರುವ ಬಗ್ಗೆ ಪ್ರಮಾಣಪತ್ರ
ಊ) ವಕೀಲ ವೃತ್ತಿ ನಡೆಸುತ್ತಿರುವ ಬಗ್ಗೆ ಸ್ಥಳೀಯ ವಕೀಲರ ಸಂಘದ ಅಧ್ಯಕ್ಷರಿಂದ ಪಡೆದ ಪ್ರಮಾಣಪತ್ರ
ಋ) ವಿಳಾಸದ ಪುರಾವೆ
ಎ) ಆದಾಯ ಪ್ರಮಾಣಪತ್ರ
ಏ) ಜಾತಿ ಪ್ರಮಾಣಪತ್ರ (ಲಭ್ಯವಿದ್ದಲ್ಲಿ)
ಐ) ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ
ಒ) ಆಧಾರ ಕಾರ್ಡ್ ನಕಲು ಪ್ರತಿ
ಓ) ಅನುಬಂಧ-III ರಲ್ಲಿರುವಂತೆ ಅಭ್ಯರ್ಥಿಯ ವಿವರ

(ಅ) ಯಿಂದ (ಒ) ರವರೆಗಿನ ದಾಖಲಾತಿಗಳ ದೃಢೀಕೃತ ನಕಲುಗಳನ್ನು ಸಲ್ಲಿಸತಕ್ಕದ್ದು.

5) ಅರ್ಜಿ ನಮೂನೆಯನ್ನು ಸಂಪೂರ್ಣವಾಗಿ ಮತ್ತು ಸರಿಯಾಗಿ ಭರ್ತಿ ಮಾಡಿರತಕ್ಕದ್ದು.

6) ಅರ್ಜಿಯಲ್ಲಿ ನಮೂದಿಸಿರುವ ಯಾವುದೇ ಮಾಹಿತಿಯು ಸತ್ಯಾಂಶದಿಂದ ಕೂಡಿಲ್ಲವೆಂದು ತಿಳಿದು ಬಂದಲ್ಲಿ ಅಭ್ಯರ್ಥಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

28/1

(ಗೀತಾ ಕೆ. ಬಿ.)
ಅಧ್ಯಕ್ಷರು, ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯ ಆಯ್ಕೆ ಸಮಿತಿ ಮತ್ತು
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಅಧಿಸೂಚನೆಯ ಪ್ರತಿಯನ್ನು ಇ-ಮೇಲ್ ಮುಖಾಂತರ ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಲು ಕಳುಹಿಸಲಾಗಿದೆಃ

1) ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಆನೇಕಲ್
2) ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದೊಡ್ಡಬಳ್ಳಾಪುರ
3) ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದೇವನಹಳ್ಳಿ
4) ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು
5) ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು
6) ಪ್ರಧಾನ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು
7) ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಆನೇಕಲ್/ದೇವನಹಳ್ಳಿ/ದೊಡ್ಡಬಳ್ಳಾಪುರ/ನೆಲಮಂಗಲ/ಹೊಸಕೋಟೆ
8) ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಆನೇಕಲ್/ದೇವನಹಳ್ಳಿ/ದೊಡ್ಡಬಳ್ಳಾಪುರ/ನೆಲಮಂಗಲ/ಹೊಸಕೋಟೆ
9) ಅಧ್ಯಕ್ಷರು, ವಕೀಲರ ಸಂಘ, ಆನೇಕಲ್/ದೇವನಹಳ್ಳಿ/ದೊಡ್ಡಬಳ್ಳಾಪುರ/ನೆಲಮಂಗಲ/ಹೊಸಕೋಟೆ

## ಅನುಬಂಧ-1

### ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯಡಿಯಲ್ಲಿ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯ ನಮೂನೆ

| | | |
|---|---|---|
| 1) | ಅರ್ಜಿದಾರರ ಹೆಸರುಃ<br>(ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 2) | ಅರ್ಜಿದಾರರ ತಂದೆ/ಗಂಡನ ಹೆಸರುಃ<br>(ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 3) | ಹುಟ್ಟಿದ ದಿನಾಂಕಃ<br>(ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 4) | ವಿಳಾಸ ಪ್ರಸ್ತುತಃ<br><br>ಖಾಯಂ ವಿಳಾಸಃ<br><br>ಕಛೇರಿ ವಿಳಾಸಃ | |
| 5) | ವಿವಾಹಿತರೇ? | |
| 6) | ಭಾರತೀಯ ಪ್ರಜೆಯೇ? | |
| 7) | ಧರ್ಮ | |
| 8) | ಜಾತಿ ಮತ್ತು ಪ್ರವರ್ಗ | |

9) ಶೈಕ್ಷಣಿಕ ವಿದ್ಯಾರ್ಹತೆಗಳುಃ

| ಕ್ರ. ಸಂ. | ತೇರ್ಗಡೆಗೊಂಡ ವಿದ್ಯಾರ್ಹತೆ | ವರ್ಷ | ಶೇಕಡಾ ಅಂಕ | ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು |
|---|---|---|---|---|
| 1 | ಎಸ್.ಎಸ್.ಎಲ್.ಸಿ. (10th) | | | |
| 2 | ಪಿ.ಯು.ಸಿ. (12th) | | | |
| 3 | ಪದವಿ | | | |
| 4 | ಕಾನೂನು ಪದವಿ | | | |
| 10) | ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೋಂದಾಯಿಸಿದ ಸಂಖ್ಯೆ ಮತ್ತು ದಿನಾಂಕ ಃ **(ಸಂಬಂಧಿತ ದಾಖಲೆಯ ಪ್ರತಿ)** | | | |
| 11) | ಪ್ರಸ್ತುತ ವಕೀಲ ವೃತ್ತಿ ನಡೆಸುತ್ತಿದ್ದಲ್ಲಿ ವಿವರ ಃ **(ಸಂಬಂಧಿತ ದಾಖಲೆಯ ಪ್ರತಿ)** | | | |
| 12) | ಇತರೆ ಮಾಹಿತಿ | | | |

ಮೇಲಿನ ನಮೂನೆಯಲ್ಲಿ ನೀಡಲಾಗಿರುವ ಮಾಹಿತಿಯನ್ನು ನಾನು ಪ್ರಜ್ಞಾಪೂರ್ವಕವಾಗಿ ಸತ್ಯವೆಂದು ಅರಿತು ನೀಡಿರುತ್ತೇನೆ. ಒಂದು ವೇಳೆ ಈ ಮಾಹಿತಿಯಲ್ಲಿ ಯಾವುದೇ ಅಂಶಗಳು ಸತ್ಯಾಂಶದಿಂದ ಕೂಡಿಲ್ಲವೆಂದು ತಿಳಿದು ಬಂದಲ್ಲಿ ಆಯ್ಕೆ ಪ್ರಾಧಿಕಾರವು/ ಸರ್ಕಾರವು ನಿಯಮಾನುಸಾರ ನನ್ನ ಮೇಲೆ ಅವಶ್ಯಕ ಕಾನೂನು ಕ್ರಮ ಜರುಗಿಸಬಹುದೆಂದು ನಾನು ಒಪ್ಪಿಗೆಯನ್ನು ಈ ಮೂಲಕ ನೀಡಿರುತ್ತೇನೆ.

ಪಾಸ್ ಪೋರ್ಟ್ ಅಳತೆಯ ಭಾವಚಿತ್ರ

ಅರ್ಜಿದಾರರ ಸಹಿ

(ಹೆಸರು)

**ಅನುಬಂಧ-3**

**Details of Law Graduates (Beneficiaries) applied during the year 2024-25**

| | |
|---|---|
| District | |
| Taluk | |
| Beneficiary Name (Eng) | |
| Beneficiary Name (Kan) | |
| Beneficiary Address (Eng) | |
| Beneficiary Address (Kan) | |
| DOB DD/MM/YEAR | |
| Gender | |
| Bank Details:<br><br>Name of the Bank & Branch | |
| IFSC Code | |
| Bank Account Number | |
| Mobile No. | |
| Aadhaar Number | |

- **Note: The Beneficiary details should be provided as per Aadhaar Card.**
- **Mobile Number linked to Aadhaar and Bank Account to be furnished.**